ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರ.ವ.ವ. ದೃಢಿಕೃತ ನಕಲು ನಿಪಿ-1
2. ದೂರಿನ ದೃಢಿಕೃತ ನಕಲು ನಿಪಿ-2
3. ಐ.ಎಂ.ವಿ.ಕಲಂನಲ್ಲಿಕೊಟ್ಟ ನೋಟಿಸಿನ ದೃಢಿಕೃತ ನಕಲು ನಿಪಿ-3
4. ಇನಕ್ವೆಸ್ಟ ಪಂಚನಾಮೆಯ ದೃಢಿಕೃತ ನಕಲು ನಿಪಿ-4
5. ನನ್ನ ಮಗ ತೇಜಸ ಈತನು ಪೊಲೀಸರಿಗೆ ಕೊಟ್ಟ ಹೇಳಿಕೆ ದೃಢಿಕೃತ ನಕಲು ನಿಪಿ-5
6. ನನ್ನ ಮಗನ ಸ್ನೇಹಿತ ಪೊಲೀಸರಿಗೆ ಕೊಟ್ಟ ಹೇಳಿಕೆಯ ದೃಡಿಕೃತ ನಕಲು ನಿಪಿ-6
7. ವಾಹನದ ಮಾಲಿಕ ಪೊಲೀಸರಿಗೆ ಕಲಂ 133 ನೋಟಿಸಿಗೆ ಕೊಟ್ಟ ಉತ್ತರದ ದೃಡಿಕೃತ ನಕಲು ನಿಪಿ-7
8. ಪಿಎಂ ವರದಿಯ ದೃಡಿಕೃತ ನಕಲು ನಿಪಿ-8
9. ವಾಹನ ಬಿಡುಗಡೆಯ ಪಂಚನಾಮೆಯ ದೃಡಿಕೃತ ನಕಲು ನಿಪಿ-9
10. ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-10
11. ಇನ್ನೊಂದು ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-11
12. ನನ್ನ ಮಗನ ಸ್ನೇಹಿತ ಸನತ ಈತನ ಗಾಯದ ಪ್ರಮಾಣ ಪತ್ರದ

ದೃಢಿಕೃತ ನಕಲು ನಿಪಿ-12

13. ನನ್ನ ಮಗನ ಸ್ನೇಹಿತ ಮಲ್ಲಿಕಾರ್ಜುನ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-13

14. ನನ್ನ ಮಗನ ಸ್ನೇಹಿತ ಸುಧಿಂದ್ರ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-14

15. ಐದು ಜನ ಸಾಕ್ಷಿದಾರರು ಕೊಟ್ಟ ಹೇಳಿಕೆಗಳು ದೃಢಿಕೃತ ನಕಲು ಒಟ್ಟಾರೆ ನಿಪಿ-15

16. ದೋಷಾರೋಪಣ ಪತ್ರದ ದೃಢಿಕೃತ ನಕಲು ನಿಪಿ-16

17. ನನ್ನ ಮಗನ ಕಂಪನಿಯವರು ಕೊಟ್ಟ 2020 ಫೆಬ್ರುವರಿ ತಿಂಗಳ ಪೇ ಸ್ಲಿಪ ನಿಪಿ-17

18. ನನ್ನ ಮಗನ ಕಂಪನಿಯವರು ಕೊಟ್ಟ 2020 ಏಪ್ರಿಲ ತಿಂಗಳ ಪೇ ಸ್ಲಿಪ ನಿಪಿ-18

ಕಾರಣ, ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಎದುರುದಾರ ಪರ ಮಾನ್ಯ ವಕೀಲರಿಂದಃ

ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 07-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 6 ನೇ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ನಾನು ಡಿಪ್ಲೋ ಮಾಡಿ ವಿದ್ಯಾಭ್ಯಾಸ ಮಾಡಿದ್ದೇನೆ. ಈ ಅರ್ಜಿಯನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನು. ನನಗೆ ಈ ಕೇಸಿನಲ್ಲಿ ಹಾಜರು ಮಾಡಿದ ದಾಖಲೆಗಳ ಮಾಹಿತಿ ಇದೆ. ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿದೆ ಎಂದು ಪ್ರವವ ಯಲ್ಲಿ ನಮೂದು ಆಗಿದೆ ಎಂದರೆ ಸಾಕ್ಷಿಯು ಸುಳ್ಳಾಗಿ ನಮೂದು ಆಗಿದೆ ಎನ್ನುತ್ತಾರೆ. ನನ್ನ ಮಗ ಚಲಾಯಿಸುತ್ತಿದ್ದ ಮೋಟರ ಸೈಕಲ ನಂ.ಕೆಎ-06/ಎಚಎ-5049. ಪೊಲೀಸರು ಸಲ್ಲಿಸಿದ ದೋಷಾರೋಪಣಾ ಪತ್ರದಲ್ಲಿ 1 ಮತ್ತು 3 ನೇ ಎದುರುದಾರರ ವಾಹನ ನನಗೆ ಡಿಕ್ಕಿ ಮಾಡಿ ಅಪಘಾತವಾಗಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ನಿಜ. ನಾವು ಈ ಕೇಸಿನಲ್ಲಿ ಎದುರುದಾರ ನಂ.5 ಮತ್ತು 6 ರವರ ಮೇಲೆ ಪರಿಹಾರದ ಹಣ ಕೇಳಿಲ್ಲ ಎಂದರೆ ನಿಜ. ಎದುರುದಾರ ನಂ. 1 ರಿಂದ 4 ರವರ ವಿರುದ್ಧ ಪರಿಹಾರದ ಹಣ ಕೊಡುವಂತೆ ಕೇಳಿದ್ದೆವೆ ಎಂದರೆ ನಿಜ.

ಪಾಟೀ ಸವಾಲುಃ ಉಳಿದ ಎದುರುದಾರ ಪರ ಮಾನ್ಯ ವಕೀಲರಿಂದಃ

2 ಮತ್ತು 4 ನೇ ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.